# ಕಾಲು ಶತಮಾನದ ಕರ್ನಾಟಕ

# ದೇವರಿಲ್ಲದ ಗುಡಿ

**ಡಾ|| ಹಾ. ಮಾ. ನಾಯಕ**

**"ಕನ್ನಡನಾಡು ಒಂದಾಗಿ ಈಗ ಇಪ್ಪತ್ತೈದು ವರ್ಷಗಳಾಗಿವೆ. ನಾಡು ಈ ಮಹಾ ಸಂದರ್ಭದ ಬೆಳ್ಳಿಯುತ್ಸವಕ್ಕೆ ಸಜ್ಜಾಗಿದೆ. ಕನಸು ನನಸಾಗಿ ಕಾಲು ಶತಮಾನ ಕಳೆದಿರುವ ಈ ಹೊತ್ತು, ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಗಳು ಅನೇಕ ಇವೆ"**

ಭಾರತದ ಪ್ರಾಂತಗಳು ಭಾಷೆಗೆ ಅನುಗುಣವಾಗಿ ರಚಿತವಾಗಬೇಕೆಂಬ ಅಪೇಕ್ಷೆ, ಭಾರತದ ಸ್ವಾತಂತ್ರ್ಯದ ಅಪೇಕ್ಷೆಯಷ್ಟೇ ಹಳೆಯದು ಎಂದರೆ ತಪ್ಪಾಗಲಾರದು. ಸ್ವಾತಂತ್ರ್ಯವನ್ನು ಬಯಸಿದ ಜನ ತಮ್ಮ ಶಿಕ್ಷಣವನ್ನು, ಆಡಳಿತವನ್ನು ತಮ್ಮ ಭಾಷೆಗಳಲ್ಲಿಯೇ ಪಡೆಯಲು ಅಪೇಕ್ಷಿಸಿದ್ದು ಅತ್ಯಂತ ಸಹಜ. ಆದ್ದರಿಂದಲೇ ಅರವಿಂದ ಮಹರ್ಷಿಗಳು ಒಂದು ಸಲ ಹೇಳಿದರು: 'ಭಾಷಾನುಗುಣಪ್ರಾಂತ ರಚನೆ ಅವಶ್ಯ. ಅಗತ್ಯ ಮತ್ತು ಅನಿವಾರ್ಯ.' ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದು ಹತ್ತಿರ ಹತ್ತಿರ ಒಂದು ದಶಕದ ಮೇಲೆಯೇ ಈ ಅಪೇಕ್ಷೆ ಕಾರ್ಯ ರೂಪಕ್ಕೆ ಬಂತು (1956). ಅದರ ಫಲವಾಗಿ ಕರ್ನಾಟಕ ರಾಜ್ಯವೂ ಮೈಸೂರಿನ ಹೆಸರಲ್ಲಿ ರೂಪಗೊಂಡಿತು (ನವೆಂಬರ್, 1). 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡಗೀತೆಯನ್ನು 'ಉದಯವಾಯಿತು' ಎಂದು ತಿದ್ದಿ ಹಾಡಿ ಕನ್ನಡಜನ ಸಂತೋಷಪಟ್ಟರು. ಕವಿಗಳು, ಸಾಹಿತಿಗಳು, ಸಾಂಸ್ಕೃತಿಕ ಶಿಲ್ಪಿಗಳು ಕಂಡ ಕನಸು ರಾಜಕೀಯಸ್ಥರ ನನಸಾಯಿತು.

ಆದರೆ ಬೇಕಾಗಿದ್ದ 'ಕರ್ನಾಟಕ ಬೇರೆಯದೇ ಆಗಿತ್ತು. ಅದನ್ನು ಕವಿ ಕುವೆಂಪು 'ಸಾಂಸ್ಕೃತಿಕ ಕರ್ನಾಟಕ' ಎಂದು ನಿರ್ದೇಶಿಸಿದ್ದರು. ಅದಕ್ಕೂ ಮೊದಲು ಅವರು ಘೋಷಿಸಿದ್ದರು:

'ಅಖಂಡ ಕರ್ನಾಟಕ: